ಕರ್ನಾಟಕ ಸರ್ಕಾರ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ

ನಿರ್ದೇಶಕರ ಕಛೇರಿ, ನೆಲಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-560001

ದೂ.ಸಂ.080-22860907 ಫ್ಯಾಕ್ಸ್:080-22868347 ಇ-ಮೇಲ್ ವಿಳಾಸ : dir-dwdsc-ka@nic.in /dirdwdscka@gmail.com

**ಕೇಂದ್ರ ಸರ್ಕಾರದ ವಿಶೇಷ ಚೇತನರ ವಿಶಿಷ್ಠ ಗುರುತಿನ ಚೀಟಿ ಯೋಜನೆಗೆ ಸಂಚಿತ ಸಂಭಾವನೆಯ ಆಧಾರದ ಮೇಲೆ ರಾಜ್ಯ ಸಂಯೋಜಕರ ನೇಮಕಾತಿಗೆ ಅರ್ಜಿ ಆಹ್ವಾನ**

ಭಾರತ ಸರ್ಕಾರ ಪ್ರಾಯೋಜಿತ ವಿಕಲಚೇತನರಿಗೆ ವಿಶಿಷ್ಠ ಗುರುತಿನ ಚೀಟಿ (UNIQUE DISABILITY ID) ನೀಡುವ ಯೋಜನೆಗೆ 6 ತಿಂಗಳ ಅವಧಿಗೆ (3 ವರ್ಷಗಳವರೆಗೆ ಮುಂದುವರೆಸಬಹುದಾಗಿದೆ) ಒಬ್ಬರು ರಾಜ್ಯ ಸಂಯೋಜಕರನ್ನು ರೂ.50,000/-ಗಳ ಮಾಸಿಕ ಸಂಚಿತ ಸಂಭಾವನೆಯ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಕಂಪ್ಯೂಟರ್ ಶಿಕ್ಷಣದಲ್ಲಿ ಪದವಿ ಅಥವಾ ಪದವಿ ಶಿಕ್ಷಣದೊಂದಿಗೆ ಕಂಪ್ಯೂಟರ್ ವಿಜ್ಞಾನ / ಮಾಹಿತಿ ತಂತ್ರಜ್ಞಾನದಲ್ಲಿ ಡಿಪ್ಲೋಮಾ ತರಬೇತಿ ಹೊಂದಿರುವ, ಇಂಗ್ಲೀಷ್ ಹಾಗೂ ಕನ್ನಡ ಭಾಷೆಗಳಲ್ಲಿ ಪ್ರಭುತ್ವ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಗರಿಷ್ಠ ವಯೋಮಿತಿ 35 ವರ್ಷಗಳು. ವೈಯಕ್ತಿಕ ವಿವರಗಳು ಹಾಗೂ ಅಗತ್ಯ ದಾಖಲಾತಿಗಳೊಡನೆ ನಿರ್ದೇಶನಾಲಯಕ್ಕೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ:10-11-2017. ಹುದ್ದೆಯ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಒಳಗೊಂಡಂತೆ ವಿವರಗಳನ್ನು ಕೆಲಸದ ವೇಳೆಯಲ್ಲಿ ನಿರ್ದೇಶನಾಲಯದ ಕಾರ್ಯಾಲಯದಿಂದ ಅಥವಾ ಇಲಾಖೆಯ ಜಾಲತಾಣ http://www.welfareofdisabled.kar.nic.in ದಿಂದ ಪಡೆದುಕೊಳ್ಳಬಹುದಾಗಿದೆ.

ನಿರ್ದೇಶಕರು,

ವಿಕಲಚೇತನರ ಹಾಗೂ ಹಿರಿಯ ನಾಗರಿಕರ

ಸಬಲೀಕರಣ ಇಲಾಖೆ, ಬೆಂಗಳೂರು.

ಕರ್ನಾಟಕ ಸರ್ಕಾರ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ
ನಿರ್ದೇಶಕರ ಕಛೇರಿ,ನೆಲಮಹಡಿ,ಪೋಡಿಯಂ ಬ್ಲಾಕ್,ವಿಶ್ವೇಶ್ವರಯ್ಯ ಗೋಪುರ,ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-560001
ದೂ.ಸಂ.080-22860907 ಫ್ಯಾಕ್ಸ್:080-22868347 ಇ-ಮೇಲ್ ವಿಳಾಸ : dir-dwdsc-ka@nic.in /dirdwdscka@gmail.com

ಸಂಖ್ಯೆ: ಇಸಿ/03/ಯುಡಿಐಡಿ/15/ರಾ-ಸಂ.ಯೋ./ಪ್ರಕಟಣೆ-2/2017-18 ದಿನಾಂಕ:21-10-2017

# ಪ್ರಕಟಣೆ

ಕೇಂದ್ರ ಸರ್ಕಾರದ ಯುಡಿಐಡಿ ಯೋಜನೆಯಡಿ ರಾಜ್ಯ ಸಮನ್ವಯಕರ ಹುದ್ದೆಗೆ ಸಂಚಿತ ಸಂಭಾವನೆಯ ಆಧಾರದ ಮೇಲೆ ಅರ್ಹ ವ್ಯಕ್ತಿಗಳಿಂದ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಈ ಕೆಳಗಿನ ಷರತ್ತುಗಳನ್ವಯ ಆಹ್ವಾನಿಸಲಾಗಿದೆ.

**ಶೈಕ್ಷಣಿಕ ವಿದ್ಯಾರ್ಹತೆ:**

1. ಪದವಿ ಶಿಕ್ಷಣದೊಂದಿಗೆ ಕಂಪ್ಯೂಟರ್ ವಿಜ್ಞಾನ/ಮಾಹಿತಿ ತಂತ್ರಜ್ಞಾನದಲ್ಲಿ ಡಿಪ್ಲೋಮಾ ತರಬೇತಿ
   ಅಥವಾ
   ಕಂಪ್ಯೂಟರ್ ಶಿಕ್ಷಣದಲ್ಲಿ ಪದವಿ.
2. ಮಾಹಿತಿ ತಂತ್ರಜ್ಞಾನ/ ಗಣಕಯಂತ್ರದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ ಅನುಭವವನ್ನು ಹೊಂದಿದ ಅರ್ಜಿದಾರರಿಗೆ ನೇಮಕಾತಿಯ ಆಯ್ಕೆಯಲ್ಲಿ ಆದ್ಯತೆಯೊಂದಿಗೆ ಪರಿಗಣಿಸಲಾಗುವುದು.

**ವಯೋಮಿತಿ**

ದಿನಾಂಕ: 31-10-2017ಕ್ಕೆ 35 ವರ್ಷವಯೋಮಿತಿಯನ್ನು ಮೀರದವರು ಮಾತ್ರ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

**ಭಾಷೆ**

ರಾಜ್ಯ ಸಮನ್ವಯಕರ ಹುದ್ದೆಗೆ ಸಲ್ಲಿಸುವ ಅರ್ಜಿದಾರರು ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ಪರಿಣಿತರಾಗಿರಬೇಕು.

**ಸಂಭಾವನೆ**

ರಾಜ್ಯ ಸಮನ್ವಯಕರ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗೆ ಯುಡಿಐಡಿ ಯೋಜನೆಯ ಅಗತ್ಯತೆಗೆ ಅನುಗುಣವಾಗಿ ರಾಜ್ಯದೊಳಗಿನ ಪ್ರಯಾಣ ಮತ್ತು ಭತ್ಯೆಯನ್ನೂ ಒಳಗೊಂಡ ಒಟ್ಟು ರೂ.50,000/-ಗಳ ಮಾಸಿಕ ಸಂಚಿತ ಸಂಭಾವನೆಯನ್ನು ಪಾವತಿಸಲಾಗುವುದು.

**ನೇಮಕಾತಿ ಅವಧಿ**

ಪ್ರಾರಂಭಿಕವಾಗಿ ಸದರಿ ಯೋಜನೆಯನುಸಾರ ಕೇಂದ್ರ ಸರ್ಕಾರದಿಂದ ನಿಗದಿ ಪಡಿಸುವ ದಿನಾಂಕದಿಂದ 6 ತಿಂಗಳ ಅವಧಿಗೆ ಮತ್ತು ಅವಶ್ಯಕವಿದ್ದಲ್ಲಿ ಗರಿಷ್ಠ 3 ವರ್ಷದ ಅವಧಿಗೆ ನೇಮಕಾತಿಯನ್ನು ಮುಂದುವರೆಸಲಾಗುವುದು. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಸದರಿ ಯೋಜನೆಯ ಹಿತದೃಷ್ಟಿಯಿಂದ ಯಾವುದೇ ಕಾರಣಗಳನ್ನು ನೀಡದೆಯೇ ರಾಜ್ಯ ಸಂಯೋಜಕರ ಸೇವೆಯನ್ನು ಮೊಟಕುಗೊಳಿಸಬಹುದಾಗಿದೆ.

ವೈಯಕ್ತಿಕ ವಿವರಗಳು ಹಾಗೂ ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಮೇಲೆ ತಿಳಿಸಿದಂತೆ ಅರ್ಜಿಯನ್ನು ದಿನಾಂಕ:10-11-2017ರೊಳಗೆ ಅರ್ಹ ಅರ್ಜಿದಾರರು ಈ ಕೆಳಗಿನ ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

# ರಾಜ್ಯ ಸಂಯೋಜಕರ ಕರ್ತವ್ಯ ಮತ್ತು ಜವಾಬ್ದಾರಿಗಳು

(i) ರಾಜ್ಯದ ಸಂಬಂಧಿತ ಇಲಾಖೆಗಳು ಹಾಗೂ ಇಲಾಖೆಯ ಯೋಜನಾ ನಿರ್ವಹಣಾ ಘಟಕದೊಂದಿಗೆ ಯೋಜನೆಯ ಅನುಷ್ಠಾನ ಸಂಬಂಧ ಸಮನ್ವಯ ಸಾಧಿಸುವುದು

(ii) ಯೋಜನೆಯ ಪ್ರಗತಿಯ ಉಸ್ತುವಾರಿ, ಯೋಜನೆಯ ವೇಳಾಸೂಚಿ ನಿರ್ವಹಣೆ ಮತ್ತು ರಾಜ್ಯದಲ್ಲಿ ಯೋಜನೆಯ ಅನುಷ್ಠಾನದ ವೇಳೆ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸುವುದು.

(iii) ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಹಂತಗಳಿಂದ ಮಾಹಿತಿ/ದತ್ತಾಂಶಗಳನ್ನು ಸಂಗ್ರಹಿಸಿ ವಿಶ್ಲೇಶಿಸಿ ಯೋಜನಾ ಸ್ಥಿತಿಗತಿಯ ವರದಿ ತಯಾರಿಸಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಶೇಷಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ರಾಜ್ಯದಲ್ಲಿ ವಿಶೇಷ ವಿಶೇಷ ಚೇತನರ ಗುರುತಿನ ಚೀಟಿ ಯೋಜನೆಯ ಉಸ್ತುವಾರಿ ಅಧಿಕಾರಿಗಳಿಗೆ ಸಲ್ಲಿಸಿ, ಪ್ರತಿಯನ್ನು ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ವಿಶೇಷಚೇತನರ ಸಬಲೀಕರಣ ಇಲಾಖೆಗೆ ಕಳುಹಿಸುವುದು.

(iv) ವಿಶೇಷಚೇತನರ ನೊಂದಣಿ/ ವಿಕಲತೆಯನ್ನು ಅಂದಾಜಿಸಲು ಜಿಲ್ಲಾ ಆಡಳಿತದ ನೆರವಿನಿಂದ ಶಿಬಿರಗಳನ್ನು ಏರ್ಪಡಿಸಲು ಸಹಕರಿಸುವುದು.

(v) ಯೋಜನೆಗೆ ಚಾಲನೆ ನೀಡಿದಾಗ ಯಾವುದಾದರೂ ಪ್ರಮುಖ ವಿಷಯಗಳಿದ್ದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಹಂತದ ನೋಡಲ್ ಅಧಿಕಾರಿಗಳು/ಉಸ್ತುವಾರಿ ಅಧಿಕಾರಿಗಳು ಮುಂತಾದ ಮೇಲಿನವರ ಗಮನಕ್ಕೆ ತರುವುದು.

(vi) ವಿಶೇಷ ಗುರುತಿನ ಚೀಟಿ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರು ವಹಿಸಿಕೊಡಬಹಹುದಾದ ಯಾವುದೇ ಕರ್ತವ್ಯ/ಜವಾಬ್ದಾರಿಗಳು.

(vii) ರಾಜ್ಯ ಸಂಯೋಜಕರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಶೇಷಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರಲ್ಲಿ ವರದಿ ಮಾಡಿಕೊಳ್ಳುವುದು. ನೇಮಕಾತಿಯು ಪೂರ್ಣಾವಧಿಯದಾಗಿದ್ದು, ಶೇ.100ರಷ್ಟು ಪಾಲ್ಗೊಳ್ಳುವಿಕೆ ಇರತಕ್ಕದ್ದು.

(viii) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಶೇಷಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರು ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ವ್ಯವಸ್ಥಾಪನಾ ನೆರವನ್ನು ರಾಜ್ಯ ಸಂಯೋಜಕರಿಗೆ ಒದಗಿಸುತ್ತಾರೆ.